ಸ್ತನಗಳುಳ್ಳ ಪೂತನಿ ಎಂಬ ದೈತ್ಯಸ್ತ್ರೀಯನ್ನು ನಂದಗೋಕುಲಕ್ಕೆ ಕಳುಹಿಸಿದನು. ಪೂತನಿಯು ಗೋಪಿಕಾಸ್ತ್ರೀಯ ವೇಷ ಧರಿಸಿ, ಸೊಗಸಾದ ಸೀರೆಯುಟ್ಟುಕೊಂಡು, ಹೂಮಾಲೆ ಮುಡಿದು, ಮಂದಹಾಸ ಬೀರುತ್ತಾ ನಂದಗೋಕುಲದಲ್ಲಿನ ನಂದಗೋಪನ ಮನೆಗೆ ಬಂದಳು. ಯಶೋದೆಯ ಮಡಿಲಿನಲ್ಲಿದ್ದ ಮಗುವನ್ನು ಎತ್ತಿಕೊಂಡು ಮುದ್ದಾಡಿದಳು. ಮಗುವಿಗೆ ಹಾಲು ಕುಡಿಸಲು ತೊಡೆಯ ಮೇಲೆ ಮಲಗಿಸಿಕೊಂಡು, ತನ್ನ ಸ್ತನವನ್ನು ಶಿಶುವಿನ ಬಾಯಿಗೆ ಇಟ್ಟಳು. ಸರ್ವಜ್ಞನಾದ ಶಿಶುರೂಪದಲ್ಲಿರುವ ಪರಮಾತ್ಮನಿಗೆ ಪೂತನಿಯ ಕುತಂತ್ರ ತಿಳಿಯದಿದ್ದೀತೆ? ಆಕೆಯ ಸ್ತನವನ್ನು ಹಿಡಿದುಕೊಂಡು ಶಿಶುರೂಪದ ಭಗವಂತನು ವಿಷಯುಕ್ತ ಹಾಲನ್ನು ಹೀರುವುದರ ಬದಲಿಗೆ ಅವಳ ಪ್ರಾಣವನ್ನೇ ಹೀರಿದನು. "ಅಯ್ಯೋ..! ಬಿಡು.. ಸತ್ತೆ!" ಎನ್ನುತ್ತಾ ಆ ಪೂತನಿ ತನ್ನ ನಿಜರೂಪದಿಂದ ಸತ್ತು ಬಿದ್ದಳು. ಆಕೆಯ ದೇಹದ ಮೇಲೆ ಬಿದ್ದ ಮಗುವು ಆಟವಾಡುತ್ತಿತ್ತು. ಕೂಡಲೇ ಯಶೋದೆಯು ಮಗುವನ್ನು ಎತ್ತಿಕೊಂಡು ತನ್ನ ಮೊಲೆಯನ್ನುಣಿಸಿ, ಮಲಗಿಸಿದಳು. ನಂತರ ಅದರ ಅಂಗಾಂಗಳಿಗೆಲ್ಲಾ ಹಿರಿಯರ ಸಲಹೆಯಂತೆ ವಿಷ್ಣುಕವಚವನ್ನು ಮಾಡಿದಳು. ಇಡೀ ಮನೆಯನ್ನೇ ಆವರಿಸಿದ್ದ ಪೂತನಿಯ ದೈತ್ಯದೇಹವನ್ನು ಗೋಪಾಲಕರು ಕಡಿದು ತುಂಡಾಗಿ ಕತ್ತರಿಸಿ ಊರ ಹೊರಗೆ ಹಾಕಿದರು.



ಪೂತನಿಯು ವಿಕಾರವಾಗಿ ಸತ್ತಳೆಂಬ ಸುದ್ದಿ ತಿಳಿದ ಕಂಸನು ಚಿಂತಾಕ್ರಾಂತನಾದನು. ಆಗ ಶಕಟಾಸುರನೆಂಬ ದೈತ್ಯನು ಮುಂದೆ ಬಂದನು. ನಂದಗೋಕುಲಕ್ಕೆ ಅವನು ಗಾಡಿಯ ರೂಪದಲ್ಲಿ ಬಂದು, ಹೊರಗೆ ಮಲಗಿದ್ದ ಮಗುವಿನ ಮೇಲೆ ಹಾಯ್ದನು. ಆ ಮಗುವು ಸಾಮಾನ್ಯ ಮಗುವೇನೂ ಆಗಿರಲಿಲ್ಲವಲ್ಲ. ತನ್ನ ಕಾಲನ್ನು ಪಟಪಟನೆ ಬಡೆಯಿತು. ಆ ಪುಟ್ಟ ಕಾಲಿನ ಹೊಡೆತವು ಆ ಗಾಡಿಗೆ ತಗುಲಿ, ಅದು ಪುಡಿಪುಡಿಯಾಗಿ, ರಾಕ್ಷಸ ರೂಪದಿಂದ ಶಕಟಾಸುರನು ಅಸು ನೀಗಿದನು.

ಶಕಟಾಸುರನೂ ಹತನಾದನೆಂದು ತಿಳಿದ ಕಂಸನು ಬೆಚ್ಚಿ ಬೆದರಿದನು. ಕಂಸನ ಆತಂಕವನ್ನು ಹೋಗಲಾಡಿಸಲು ಮುಂದಾದ ತೃಣಾವರ್ತನೆಂಬ ದೈತ್ಯನು, ಶಿಶುವಿನ ಸಮಸ್ಯೆಯನ್ನು ತಾನು ಬಗೆಹರಿಸುವೆನೆಂದು ಅವನಿಗೆ ಅಭಯವನ್ನಿತ್ತನು. ಯಶೋದೆಯು ಮಗುವಿಗೆ ಹಾಲುಣಿಸಿ, ಲಾಲಿ ಹಾಡಿ, ಕೋಣೆದಲ್ಲಿ ಮಲಗಿಸಿ, ತನ್ನ ಗೃಹಕೃತ್ಯದಲ್ಲಿ ತೊಡಗಿಕೊಂಡಳು. ಅಷ್ಟರಲ್ಲಿ ಅಲ್ಲಿಗೆ ತೃಣಾವರ್ತನು ಮಾಯವಾಗಿ ಗಾಳಿಯ ರೂಪದಲ್ಲಿ ಬಂದು, ಸುಂಟರಗಾಳಿಯನ್ನು ಎಬ್ಬಿಸಿದನು. ಸುಂಟರಗಾಳಿಯ ಮೂಲಕ ಮಗುವನ್ನು ಎತ್ತಿಕೊಂಡು, ಮೇಲಕ್ಕೆ ಕೊಂಡೊಯ್ದು ಗಾಳಿಯಲ್ಲಿ ನಿಲ್ಲಿಸಿಬಿಟ್ಟನು. ಮಗು ಕೆಳಕ್ಕೆ ಬಿದ್ದರೆ, ಅದು ಸಾಯುವುದೆಂದು ಅವನು ಭಾವಿಸಿದನು. ಆದರೆ ಶಿಶುವಿನ ವೇಷದಲ್ಲಿದ್ದ ಭಗವಂತನು ಆತನ ಕೊರಳಿಗೆ ಜೋತು ಬಿದ್ದನು. ತೃಣಾವರ್ತನು ಉಸಿರುಕಟ್ಟಿ ಪ್ರಾಣಬಿಟ್ಟು ನೆಲದ ಮೇಲೆ ತನ್ನ ದೈತ್ಯ ದೇಹದೊಂದಿಗೆ ಬಿದ್ದು ಮರಣವನ್ನಪ್ಪಿದನು. ನಂದಗೋಪನು ಮಗನ ಹಾಗೂ ತನ್ನ ಕುಟುಂಬಕ್ಕೆ ಏನೂ ಕೇಡಾಗದಂತೆ ಯಜ್ಞಯಾಗಾದಿಗಳನ್ನೂ, ಅಷ್ಟದಿಗ್ಬಂಧನಗಳನ್ನೂ ಮಾಡಿಸಿದನು. ಬಡಬಗ್ಗರಿಗೂ, ಬ್ರಾಹ್ಮಣರಿಗೂ ಗೋದಾನ, ಸುವರ್ಣದಾನಗಳನ್ನು ಮಾಡಿದನು.

ನಂದಗೋಕುಲದಲ್ಲಿ ಬೆಳೆಯುತ್ತಿರುವ ರೆಂದು ತನ್ನ ಮಕ್ಕಳಿಬ್ಬರಿಗೂ ನಾಮಕರಣ ಶಾಸ್ತ್ರ ಮಾಡಿಸಬೇಕೆಂದು ವಸುದೇವನು ನಿರ್ಧರಿಸಿದನು. ಅದನ್ನು ತನ್ನ ಕುಲ ಪುರೋಹಿತರಾದ ಗರ್ಗಋಷಿಗಳೇ ಅದನ್ನು ಮಾಡಬೇಕೆಂದು ಅವನು ಬಯಸಿದನು. ಕಂಸನ ಭಯದಿಂದಾಗಿ ಗೌಪ್ಯವಾಗಿ ಅವರನ್ನು ನಂದಗೋಕುಲಕ್ಕೆ ಕಳುಹಿಸಿದನು. ನಂದಗೋಪನ ಮನೆಗೆ ಬಂದ ಗರ್ಗರಿಗೆ ನಂದಗೋಪನು ಸ್ವಾಗತಿಸಿ ಸತ್ಕರಿಸಿದನು. ಅವರಿಗೆ ಸಾಷ್ಟಾಂಗ ನಮಸ್ಕರಿಸಿ, 'ತನ್ನ ಮಕ್ಕಳಿಗೆ ನಾಮಕರಣ ಮಾಡಿ' ಎಂದು ಅವರನ್ನು ವಿನಂತಿಸಿದನು. ಸಂದರ್ಭದ ಸೂಕ್ಷ್ಮತೆಯನ್ನು ಗಮನಿಸಿದ ಗರ್ಗರು ಕಂಸನಿಗೆ ತಿಳಿಯದಂತೆ ನಾಮಕರಣ ಮಾಡಿಸಬೇಕೆಂದು ಹೇಳಿದನು. ವೇದಮಂತ್ರ ಘೋಷಗಳೊಂದಿಗೆ ರೋಹಿಣಿಯ ಪುತ್ರನಿಗೆ ಬಲರಾಮನೆಂದೂ, ಯಶೋದೆಯ ಮಗನಿಗೆ ಕೃಷ್ಣನೆಂದೂ ನಾಮಕರಣ ಮಾಡಿದರು. ನಂತರ ಯಾರಿಗೂ ತಿಳಿಯದಂತೆ ಮಥುರಾ ಪಟ್ಟಣಕ್ಕೆ ಗರ್ಗರು ಹಿಂತಿರುಗಿದರು. ಬಲರಾಮ-ಕೃಷ್ಣರು ನೋಡನೋಡುತ್ತಿದ್ದಂತೆಯೇ ಬೆಳೆದು ಬಾಲಕರಾದರು. ಕೃಷ್ಣನು ಗೋಪಾಲಕರ ಗುಂಪು ಕಟ್ಟಿದನು. ಅವರು ಕೊಟ್ಟಿಗೆಗೆ ಹೋಗಿ ಕಟ್ಟಿದ್ದ ದನಕರುಗಳನ್ನು ಬಿಚ್ಚುವರು; ಗೋಪಿಕಾಸ್ತ್ರೀಯರ ಮನೆಗೆ ನುಗ್ಗಿ ಅವರಿಗೆ ತಿಳಿಯದಂತೆ ಕಳ್ಳತನದಿಂದ ಹಾಲು, ಮೊಸರು, ಬೆಣ್ಣೆ, ತುಪ್ಪ ತಿಂದು ಗೆಳೆಯರಿಗೂ ತಿನ್ನಿಸುತ್ತಾ ತುಂಟತನ ಮಾಡುತ್ತಿದ್ದರು. ಗೋಪಿಕಾಸ್ತ್ರೀಯರು ಕೃಷ್ಣನ ತುಂಟಾಟದ ಪರಿವೆಯನ್ನು ತಾಯಿಯಾದ ಯಶೋದೆಯಲ್ಲಿ ದೂರು ಹೇಳುತ್ತಿದ್ದರು. ಕೃಷ್ಣನನ್ನು ಯಶೋದೆಯು ವಿಚಾರಿಸಿದರೆ, ಮುಗ್ಧನಂತೆ ಅವನು, ತಾನು ತುಂಟಾಟ ಮಾಡಿಲ್ಲವೆಂದು ಹೇಳುತ್ತಿದ್ದನು. ಆ ಮೋಡಿಯ ಮಾತಿಗೆ ಮರುಳಾಗಿ ಯಶೋದೆಯು ಕೃಷ್ಣನನ್ನು ಆಲಂಗಿಸಿಕೊಂಡು, ಗೋಪಿಕಾಸ್ತ್ರೀಯರನ್ನೇ ಬೈದು ಕಳುಹಿಸುತ್ತಿದ್ದಳು. ◆



# ಸ್ವಾಮಿ ವಿವೇಕಾನಂದರು ನಿರೂಪಿಸಿದ

# ನೀತಿಕಥೆಗಳು

ಡಾ. ಕೆ. ಅನಂತರಾಮು

## ಗೋಪಾಲಕನ ಆತ್ಮದರ್ಶನ

ಆತ್ಮಸಾಕ್ಷಾತ್ಕಾರಕ್ಕಿರುವ ಮಾರ್ಗವೇನು ಎಂಬ ಪ್ರಶ್ನೆ ಎದ್ದುಕೊಂಡಾಗ "ಸದ್ಗುರುವೊಬ್ಬನು ನಮಗೆ ಬೇಕು" ಎಂಬ ಉತ್ತರ ಸಿದ್ಧವಾಗುತ್ತದೆ. ಆ ಸದ್ಗುರುವಿನ ಉಪದೇಶವಾಕ್ಯಗಳಲ್ಲಿ ನಮ್ಮ ಶ್ರದ್ಧೆ ಬಲಯುತವಾಗಿದ್ದರೆ, ಅವನು ಹೇಳಿದಂತೆ ಸಾಧನೆ ಮಾಡಿದರೆ, ನಮ್ಮೊಳಗೇ ಇರುವ, ಗುರುವಿನ ಗುರು ಭಗವಂತನೇ ಮಾತನಾಡುತ್ತಾನೆ. ಶಾಶ್ವತವಾದ ಜ್ಞಾನವು ನಮ್ಮ ಹೃದಯದಲ್ಲಿಯೇ ಸ್ಫುರಿಸುತ್ತದೆ. ವಿವೇಕಾನಂದರ ವಾಕ್ಯಗಳಲ್ಲೇ ಹೇಳುವುದಾದರೆ "ಅಂತಹ ವ್ಯಕ್ತಿಗೆ ಯಾವುದೇ ಗ್ರಂಥದ ಆವಶ್ಯಕತೆಯಿಲ್ಲ. ಯಾವುದೇ ಚರ್ಚು–ದೇವಾಲಯಗಳಿಗೆ ಅವನು ಹೋಗಬೇಕಾಗಿಲ್ಲ, ಯಾವ ದೇವತೆಯನ್ನೂ ಆಶ್ರಯಿಸಬೇಕಾಗಿಲ್ಲ, ಯಾವ ಯಕ್ಷಗಂಧರ್ವರ ಉಪದೇಶವನ್ನೂ ಆಲಿಸಬೇಕಾಗಿಲ್ಲ. ಭಗವಂತನೇ ಅವನಿಗೆ ಗುರುವಾಗುತ್ತಾನೆ. ಅವನು ತನ್ನಿಂದಲೇ ತನಗೆ ಬೇಕಾದುದನ್ನೆಲ್ಲಾ ಪಡೆದುಕೊಳ್ಳುತ್ತಾನೆ. ಅವನ ದೇಹವೇ ಪವಿತ್ರ ದೇವಾಲಯವಾಗಿ ಅದರಲ್ಲಿ ಸೃಷ್ಟಿಕರ್ತನಾದ ಭಗವಂತನು ವಾಸಮಾಡುತ್ತಾನೆ". ಈ ತತ್ತ್ವವನ್ನು ಉಪದೇಶಿಸುವ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಸಾಧಾರಣ ದನಗಾಹಿಯೊಬ್ಬನು ತನ್ನ ದೇಹವನ್ನೇ ದೇವಾಲಯವಾಗಿಸಿಕೊಂಡು, ಭಗವಂತನನ್ನು ಪ್ರತಿಷ್ಠಾಪಿಸಿಕೊಂಡ ಕಥೆಯನ್ನು ನಿರೂಪಿಸಿದ್ದಾರೆ.

ಒಂದು ಅರಣ್ಯದಲ್ಲಿ ಹರಿಯುತ್ತಿದ್ದ ನದಿಯ ತೀರದಲ್ಲಿ ನಯನಾಭಿರಾಮವಾದ ಪ್ರಕೃತಿಸೌಂದರ್ಯವು ಮೆರೆಯುತ್ತಿತ್ತು. ಅಲ್ಲಿ ಯೋಗಿಮಹಾತ್ಮರೊಬ್ಬರು ಆಶ್ರಮವೊಂದನ್ನು ಕಟ್ಟಿಕೊಂಡು ತಪಸ್ಸು ಮಾಡುತ್ತಿದ್ದರು. ಸಮೀಪದ ಗ್ರಾಮದಿಂದ ಗೋಪಾಲಕನೊಬ್ಬನು ತನ್ನ ದನಕರುಗಳನ್ನು ಮೇಯಿಸಲು ನಿತ್ಯವೂ ಅದೇ ಅರಣ್ಯಪ್ರದೇಶಕ್ಕೆ ಬರುತ್ತಿದ್ದನು. ಅವನು ಆ ಯೋಗಿವರ್ಯರನ್ನು ನಿತ್ಯವೂ ದೂರದಿಂದಲೇ ನೋಡುತ್ತಿದ್ದನು. ಅವರು ಗಂಟೆಗಟ್ಟಳೆ ಧ್ಯಾನನಿರತರಾಗುವುದನ್ನೂ ಗ್ರಂಥಗಳನ್ನು ಅಧ್ಯಯನ ಮಾಡುವುದನ್ನೂ ಅವನು ಕುತೂಹಲ ತುಂಬಿದ ಕಣ್ಣುಗಳಿಂದ ವೀಕ್ಷಿಸುತ್ತಿದ್ದನು. ಆ ಗೋಪಾಲಕನಿಗೆ ಸಹಜವಾಗಿಯೇ ದೇವರ ವಿಷಯದಲ್ಲಿ ನಿರ್ಮಲವಾದ ಭಕ್ತಿಯಿತ್ತು. ಆ ದೇವರನ್ನು ಒಲಿಸಿಕೊಂಡ ಭಕ್ತರ ಕಥೆಗಳೂ ಅವನ ಕಿವಿಯ ಮೇಲೆ ಬಿದ್ದಿದ್ದವು. "ನಾನೂ ದೇವರನ್ನು ನೋಡಬೇಕು, ಅವನನ್ನು ಒಲಿಸಿಕೊಳ್ಳಬೇಕು" ಎಂಬ ತುಡಿತಕ್ಕೆ ಅವನು ತುತ್ತಾಗಿದ್ದನು. ಅದಕ್ಕೇನು ಮಾರ್ಗ ಎಂಬುದನ್ನರಿಯದೆ ತನ್ನ ಮನದಲ್ಲಿಯೇ ತೊಳಲಾಡುತ್ತಿದ್ದನು.

"ಈ ಯೋಗಿಮಹಾತ್ಮರು ನನಗೆ ದಾರಿ ತೋರಿಸಿಯಾರು" ಎಂದುಕೊಂಡು ಆ ಗೋಪಾಲಕನು ಒಂದು ದಿನ ಆ ಅರಣ್ಯಪ್ರಾಂತದಲ್ಲಿ ದನಗಳನ್ನು ಮೇಯಲು ಬಿಟ್ಟು, ಅಳುಕುತ್ತಲೇ ಆ ಯೋಗೀಶ್ವರರ ಆಶ್ರಮವನ್ನು ಹೊಕ್ಕು ಅವರಿಗೆ ಅಡ್ಡಬಿದ್ದನು. ಅವರು, "ಏನಪ್ಪಾ ಸಮಾಚಾರ?" ಎಂದರು. "ಸ್ವಾಮಿ, ನಾನು ದೇವರನ್ನು ನೋಡಬೇಕೆಂದಿದ್ದೇನೆ, ಅವನನ್ನು ಒಲಿಸಿಕೊಳ್ಳಬೇಕೆಂದಿದ್ದೇನೆ. ಅದಕ್ಕಾಗಿ ಏನು ಮಾಡಬೇಕು ಎಂಬುದನ್ನು ದಯಮಾಡಿ ನನಗೆ ತಿಳಿಸಿಕೊಡಿ" ಎಂದು ಆರ್ತನಾಗಿ ಬೇಡಿಕೊಂಡನು. ಯೋಗೀಶ್ವರರಾದರೋ, "ನೀನೊಬ್ಬ ಸಾಮಾನ್ಯ ದನಗಾಹಿ, ದೇವರನ್ನು ನೀನು ಅರ್ಥಮಾಡಿಕೊಳ್ಳಲಾರೆ, ಅವನನ್ನು ಪಡೆದುಕೊಳ್ಳಲಾರೆ, ಪಶುಪಾಲನೆಯ ನಿನ್ನ ಕಾರ್ಯವನ್ನು ಮಾಡಿಕೊಂಡು ನೆಮ್ಮದಿಯಿಂದಿರು, ದೇವರ ಗೊಡವೆ ನಿನಗೆ ಬೇಡ" ಎಂದು ಅವನ ಉತ್ಸಾಹಕ್ಕೆ ತಣ್ಣೀರೆರಚಿ ಕಳುಹಿಸಿಬಿಟ್ಟರು. ಗೋಪಾಲಕನು ನಿರಾಶನಾಗಿ ಹಿಂದಕ್ಕೆ ಬಂದನು. ಆದರೆ ದೇವರನ್ನು ಕಾಣುವ ಆತುರವು ಮಾತ್ರ ತಗ್ಗದೆ ಅದು ಇನ್ನಷ್ಟು ಉಜ್ವಲವಾಯಿತು. ದೇವರನ್ನು ಕಂಡ ಹೊರತು ತನಗೆ ಶಾಂತಿ ಸಮಾಧಾನಗಳಿಲ್ಲ ಎಂಬ ಪರಿಸ್ಥಿತಿಯನ್ನು ಅವನು ಮುಟ್ಟಿದನು.

ಹೀಗೆಯೇ ದಿನಗಳು ಉರುಳುತ್ತಿರುವಾಗ ಆ ಗೋಪಾಲಕನು, ಮತ್ತೊಂದು ದಿನ ಯೋಗೀಶ್ವರರನ್ನು ಸಮೀಪಿಸಿ, ಅವರ ಮುಂದೆ ಮಂಡಿಯೂರಿ ಕುಳಿತು, "ಸ್ವಾಮಿ, ನಾನು ದೇವರನ್ನು ಕಾಣುವ ವಿಚಾರವಾಗಿ ತಾವು ದಾರಿ ತೋರಲೇಬೇಕು" ಎಂದು ಒತ್ತಾಯಪೂರ್ವಕವಾಗಿ ಗೋಗರೆದನು. ಆಗ ಯೋಗೀಶ್ವರರು, "ಅಯ್ಯೋ, ನೀನೊಬ್ಬ ಮುಗ್ಧಹುಡುಗ. ನೀನೆಂದರೇನು, ದೇವರೆಂದರೇನು? ಅದರ ಬಗ್ಗೆ ತಲೆಕೆಡಿಸಿಕೊಳ್ಳಲೇಬೇಡ, ನಿನ್ನ ಕೆಲಸ ನೀನು ಮಾಡಿಕೊಂಡು ನೆಮ್ಮದಿಯಿಂದಿರು" ಎಂದು ಹಿಂದಿನಂತೆಯೇ ಉತ್ಸಾಹಭಂಗಮಾಡಿ ಹಿಂದಕ್ಕೆ ಅಟ್ಟಿಬಿಟ್ಟರು.

ಗೋಪಾಲಕನಿಗಾದರೋ ದೇವರನ್ನು ಪಡೆಯುವ ಹಂಬಲವು ಹೆಮ್ಮರವಾಗಿ ಬೆಳೆದುಬಿಟ್ಟಿತು. ಅವನಿಗೆ ಅನ್ನಾಹಾರಗಳು ರುಚಿಸದಾದವು, ಕಣ್ಣಿಗೆ ನಿದ್ರೆ ಹತ್ತದಾಯಿತು. "ನಾನು ದೇವರನ್ನು ಕಾಣಲೇಬೇಕು" ಎಂದು ಕಣ್ಣೀರು ಹರಿಸುತ್ತಾ ಮೂರನೆಯ ಬಾರಿಗೆ ಬಂದು, ಯೋಗೀಶ್ವರರ ಪಾದಗಳ ಮೇಲೆ ಬಿದ್ದು, ಅಶ್ರುಜಲಾಭಿಷೇಕ ಮಾಡಿಬಿಟ್ಟನು. ಅವನ ಭಾವೋನ್ಮಾದವನ್ನು ಕಂಡ ಯೋಗೀಶ್ವರರ ಮನಸ್ಸು ಕರಗಿತು. ಆಗ ಯೋಗೀಶ್ವರರು, "ದೇವರ ವಿಚಾರವಾಗಿ ನೀನು ಏನು ತಿಳಿಯಬೇಕೆಂದಿದ್ದೀಯೋ ಅದನ್ನು ನನಗೆ ಹೇಳು" ಎಂದರು. ಆಗ ಗೋಪಾಲಕನು ಜೀವ ಬಂದಂತಾಗಿ, "ಸ್ವಾಮಿ, ದೇವರು ಹೇಗಿರುತ್ತಾನೆ, ಅವನ ರೂಪ ಯಾವುದು, ಅವನು ಎಲ್ಲಿರುತ್ತಾನೆ, ಅವನನ್ನು ನೋಡುವುದು ಹೇಗೆ?" ಎಂದು ಕಾತರತೆಯಿಂದ ಕೇಳಿದನು. ಆಗ ಯೋಗೀಶ್ವರರು, "ನೀನು ಮೇಯಿಸುತ್ತಿರುವ ದನಗಳ ಗುಂಪಿನಲ್ಲಿ ದೊಡ್ಡದೊಂದು ಗೂಳಿಬಸವನಿದೆಯಲ್ಲಾ,